ಚಿತ್ರದುದ್ದಕ್ಕೂ ಆಶ್ರಮದಲ್ಲಿ ಬಂದು ಹೋಗುವ ನಾಯಿಮರಿ, ಬೆಕ್ಕು, ಕೋಳಿ, ಕೊಳದಲ್ಲಿನ ಮೀನುಗಳು, ದೋಣಿ, ಬುದ್ಧನ ಹಳೆಯ ವಿಗ್ರಹ ಎಲ್ಲವೂ ಬೇರೆ ಬೇರೆ ರೀತಿಯಲ್ಲಿ ಕಥನ ಕಟ್ಟುವಿಕೆಗೆ ಪೂರಕವಾಗಿಯೇ ಕೆಲಸ ಮಾಡುತ್ತವೆ. ಯಾವೊಂದು ದೃಶ್ಯವೂ, ಫ್ರೇಮಿನಲ್ಲಿನ ಸಣ್ಣ ಚಲನೆಯೂ ವ್ಯರ್ಥವಾಗದಂತೆ, ಎಲ್ಲವೂ ಚಿತ್ರದ ಉದ್ದೇಶಕ್ಕೆ ಪೂರಕವೇ ಆಗುವಂತೆ ಕಟ್ಟುತ್ತ ಹೋಗುವುದು ಕಿಮ್ ಕಿ ಡುಕ್‌ನ ನಿರ್ದೇಶನದ ಶೈಲಿ. ಮಾತಿನಲ್ಲಿ ಹೇಳಲಾಗದ ಅನೂಹ್ಯವನ್ನು ಕಾಣಿಸುವುದೇ ಸಿನಿಮಾ ಮಾಧ್ಯಮದ ಶಕ್ತಿ, ಅಂಥ ಅನೂಹ್ಯಕ್ಕೆ ಅತಿಯಾದ ಮಾತು ತಡೆಯೇ ಆಗುತ್ತದೆ ಎಂಬುದು ಅವನ ನಂಬಿಕೆ. ಅದಕ್ಕೆ ತಕ್ಕಂತೆ ಇಡೀ ಚಿತ್ರದಲ್ಲಿ ಮಾತಿನ ಬಳಕೆ ಅತ್ಯಂತ ಕನಿಷ್ಠವಾಗಿದೆ. ಹಾಗೆ ಅಪರೂಪಕ್ಕೆ ಬಂದು ಹೋಗುವ ಮಾತೂ ಮೌನದ ಮತ್ತೊಂದು ಮಜಲಿಗೆ ಜಿಗಿಯುವ ಸೇತುವೆಯಷ್ಟೇ ಆಗಿರುತ್ತವೆ.

ಸ್ವತಃ ನಿರ್ದೇಶಕ ಕಿಮ್ ಕಿ ಡುಕ್ ಅವರೇ ಈ ಚಿತ್ರದಲ್ಲಿ ಪ್ರಮುಖ ಪಾತ್ರವೊಂದರಲ್ಲಿ (ಯುವ ಭಿಕ್ಷು) ನಟಿಸಿರುವುದೂ ವಿಶೇಷ.

ಪ್ರೇಕ್ಷಕನೊಂದಿಗಿನ ಅನುಸಂಧಾನದಲ್ಲಿ ತಾಂತ್ರಿಕ ಅಂಶಗಳು (ಸಂಗೀತ, ಛಾಯಾಗ್ರಹಣ, ಸಂಕಲನ ಇತ್ಯಾದಿ) ಕಥನವನ್ನು ಹಿಂದಿಕ್ಕಿ ಎಂದಿಗೂ ಮುನ್ನೆಲೆಗೆ ಬರುವುದಿಲ್ಲ. ಹಾಗಂತ ಅವುಗಳಿಗೆ ಪ್ರಾಮುಖ್ಯ ಇಲ್ಲ ಎಂದಲ್ಲ. ಎಷ್ಟು ಬೇಕೋ ಅಷ್ಟನ್ನು ಅತ್ಯಂತ ಪರಿಣಾಮಕಾರಿಯಾಗಿ ಕಥೆಯ ಭಾಗವಾಗಿಯೇ ಬಳಸಿಕೊಳ್ಳುವ ರೀತಿಗೆ ಈ ಚಿತ್ರ ಒಂದು ಅತ್ಯುತ್ತಮ ಮಾದರಿ. ಈ ಚಿತ್ರದಲ್ಲಿ ಬರುವ ಗಂಡು ಹೆಣ್ಣಿನ ಸಂಭೋಗವನ್ನು ಲಾಂಗ್ ಶಾಟ್‌ಗಳಲ್ಲಿ, ಕ್ಲೋಸ್ ಅಪ್ ಇದ್ದಾಗಲೂ ಅವರ ಮುಖ ಮತ್ತು ಕಾಲುಗಳ ಮೂಲಕವೇ ಭಾವವನ್ನು ಸೆರೆಹಿಡಿದಿರುವ ರೀತಿ ಇದಕ್ಕೆ ಒಂದು ಒಳ್ಳೆಯ ಉದಾಹರಣೆ (ಛಾಯಾಗ್ರಹಣ: ಬೀಕ್ ಡಾಂಗ್ ಹ್ಯೂನ್). ಹಿನ್ನೆಲೆ ಸಂಗೀತವೂ ಮತ್ತು ಎರಡು ಕಡೆ ಬಳಸಿಕೊಂಡಿರುವ ಜನಪದ ಹಾಡುಗಳೂ ಆ ದೃಶ್ಯಕ್ಕೊಂದು ಅಧ್ಯಾತ್ಮಿಕ ಜಿಗಿತವನ್ನು ಕೊಡಬಲ್ಲ ಇಂಧನಗಳಾಗಿ ಕೆಲಸ ಮಾಡುತ್ತವೆ (ಸಂಗೀತ: ಬಾರ್ಕ್ ಜಿ ವೂಂಗ್).

ಝೆನ್ ಕಥೆಗಳಲ್ಲಿ ಕಾಣುವ ಸರಳ ಮತ್ತು ಸಂಕೀರ್ಣತೆ, ನಿಗೂಢತೆ, ತೆಳುವಾದ ವ್ಯಂಗ್ಯ, ಘನವಾದ ಕಾಣ್ಕೆ, ಚಕ್ಕನೆ ಮಿಂಚಿ ಮರೆಯಾಗುವ ಸತ್ಯದ ಮಿಂಚು, ರೂಪಕಗಳು ಎಲ್ಲವೂ ಈ ಸಿನಿಮಾದಲ್ಲಿ ಇಡಿಕಿರಿದಿವೆ. ಇದೊಂದು ಬಗೆಯಲ್ಲಿ ಬರಿಮಾತಿಗೆ, ಮೇಲುನೋಟಕ್ಕೆ ದಕ್ಕದ ಅನುಭಾವವನ್ನು ಕಾಣಿಸುವ ಪ್ರಯತ್ನ. ತಿನ್ನಲಾರದ ಹಣ್ಣಿನ ರುಚಿಯನ್ನು ಇನ್ನೊಬ್ಬರಿಗೆ ಬಣ್ಣಿಸುವ ಪಡಿಪಾಟಲು. ಹಾಗಿದ್ದೂ ಯಾವ ಹಂತದಲ್ಲಿಯೂ ಬೇಸರ ಹುಟ್ಟಿಸದಂತೆ ಹಗುರವಾಗಿ ನೋಡಿಸಿಕೊಂಡುಹೋಗುವ ಗುಣವೂ ಈ ಚಿತ್ರಕ್ಕಿದೆ.

ಚಿತ್ರದ ಅಂತ್ಯ ಇರುವುದೂ ಆರಂಭವಾದ ಬಿಂದುವಿನಲ್ಲಿಯೇ. ಸ್ವಂತ ಪರಿಶ್ರಮದಿಂದ ಸಿದ್ಧಿ ಗಳಿಸಿಕೊಂಡ ಶಿಷ್ಯ ಗುರುವಾಗುತ್ತಾನೆ. ಅವನ ಆಶ್ರಮವನ್ನು ಇನ್ನೊರ್ವ ಪುಟಾಣಿ ಶಿಷ್ಯ ಸೇರಿಕೊಳ್ಳುತ್ತಾನೆ. ಅವನು ಮತ್ತದೇ ಬೆಟ್ಟಕ್ಕೆ ಹೋಗಿ ಮೀನು, ಕಪ್ಪೆ, ಹಾವುಗಳ ಹಿಂಸೆಗೆ ತೊಡಗುತ್ತಾನೆ. ಹಿಂಸೆ ಅದೇ, ರೀತಿ ಬೇರೆ.

ಎಲ್ಲಿಂದ ಹೊರಟಿದ್ದೆವೋ ಅಲ್ಲಿಗೇ ತಂದು ನಿಲ್ಲಿಸಿ ಚಿತ್ರ ಮುಗಿಯುತ್ತದೆ. ನಮ್ಮೊಳಗೆ ಆ ಆವರ್ತನದ ಆಯಾಮಗಳು ಹುಟ್ಟಿಸುವ ರಿಂಗಣಗಳು ಮಾತ್ರ ಮುಕ್ತಾಯದ ಬಿಂದುವಿನಿಂದಲೇ ಶುರುವಾಗುತ್ತವೆ. ಹಾಗೆಯೇ ಬಹುಕಾಲದವರೆಗೆ ಮುಂದುವರಿಯುತ್ತವೆ. ಅದು ಈ ಸಿನಿಮಾದ ಸಾರ್ಥಕ್ಯ.